ಮಾಡುವುದೇನು?

ಅವನ ದೃಷ್ಟಿ ಮೇಲಕ್ಕೆ ಹೋಯಿತು. ಸ್ವಾಮಿ, ಏನಿದು ಎಂದು ಅತ್ತ ಕಡೆ ನೋಡುತ್ತಾ ಪ್ರಶ್ನಿಸಿಕೊಂಡ.

ಕ್ಷಣ ಕಳೆದ ಮೇಲೆ ಚಳಿ ಬಿಟ್ಟವನಂತೆ ಮೈ ಕೊಡವಿಕೊಂಡ ಅವನು, ಮಕ್ಕಳ ಬಳಿ ಧಾವಿಸಿ, ಅವರ ತೋಳುಗಳನ್ನು ಹಿಡಿದು ಕುಲುಕುತ್ತಾ,

'ಮಕ್ಕಳ, ಏಳಿ... ಏಳಿ...' ಎಂದು ಅವಸರ ತುಂಬಿದ ದನಿಯಿಂದ ಎಬ್ಬಿಸತೊಗಿದ.

★★★

ಹೇ ಪ್ರಾಣವೇ, ನೀನೇ ದೇವತೆಗಳಿಗೆ ಹವಿಸ್ಸನ್ನು ನಮ್ಮ ಪರವಾಗಿ ತಲುಪಿಸುವ ಅಗ್ನಿಯಾಗಿದ್ದೀಯ, ಪಿತೃಲೋಕದಲ್ಲಿರುವ ಜೀವಿಗಳಿಗೆ ಆಹಾರ ನೀನೇ ಆಗಿದ್ದೀಯ.

★★★

ಹುಡುಗರಿಗೆ ಒಳ್ಳೆ ನಿದ್ರೆ ಹತ್ತಿತ್ತು. ಇಡೀ ದಿನದ ಆಯಾಸ ಒಮ್ಮೆಗೇ ಅವರ ದೇಹವನ್ನು ಆವರಿಸಿದ್ದಂತೆ ಕಂಡಿತು. ಶಂಭುವಿಗೆ ಗಾಭರಿಯಾಗತೊಡಗಿತು. ಹತ್ತಾರು ಬಾರಿ ಜೋರಾಗಿ ಕುಲುಕಿದರೂ, 'ಹುಂ... ಹುಂ...' ಎನ್ನುತ್ತಾ ಹುಡುಗರು ಮಗ್ಗಲು ಬದಲಿಸುವ ಪ್ರಯತ್ನ ಮಾಡುತ್ತಿದ್ದರು.

ದೂರದಲ್ಲಿ ಎದ್ದ ಜನರ ಆಕ್ರಂದನದ ಧ್ವನಿ ಈಗ ಸ್ಪಷ್ಟವಾಗಿ ಕೇಳಿಸತೊಡಗಿತು.

ಶಂಭುವಿನ ದೃಷ್ಟಿಗೆ ತೀರಾ ಸನಿಹದಲ್ಲೆಂಬಂತೆ ಕತ್ತಲೆಯ ಮುಸುಕಿನಲ್ಲಿ ಅಲೆಯಲೆಯಾಗಿ ಕರಿಯ ಛಾಯೆಗಳು ಮುನ್ನುಗ್ಗುತ್ತಿರುವಂತೆ ಕಂಡಿತು.

ಭಯದಿಂದ ಶಂಭುವಿನ ಗಂಟಲು ಒಣಗಿತು. ಅವನ ಮುಖದ ಮೇಲೆ ಧಾರೆಯಾಗಿ ಬೆವರು ಹರಿಯತೊಡಗಿತು.

ಇನ್ನು ಯೋಚಿಸುತ್ತಾ ನಿಲ್ಲುವುದರಲ್ಲಿ ಅರ್ಥ ಇಲ್ಲವೆಂದುಕೊಂಡ ಅವನು, ಅನಾಮತ್ತು ಮಕ್ಕಳನ್ನು ಎತ್ತಿಕೊಂಡು ಜನಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಓಡತೊಡಗಿದ.

ಕತ್ತಲೆಯಲ್ಲಿ ಕಲ್ಲು ಮುಳ್ಳಿನ ಹಾದಿ ಸರಿಯಾಗಿ ಕಾಣಿಸುತ್ತಿರಲಿಲ್ಲ. ಅಮಾವಾಸ್ಯೆಯ ಹಿಂದಿನ ದಿನವಾದ ಚತುರ್ದಶಿಯ ಕಡುಕತ್ತಲನ್ನು ಓಡಿಸುವಲ್ಲಿ ಅಲ್ಲಲ್ಲಿ ಹರಡಿದ್ದ ಬೆಂಕಿಯ ನಾಲಿಗೆಗಳು ಅಷ್ಟು ಯಶಸ್ವಿಯಾಗಿರಲಿಲ್ಲ.

ಹಿಂದಿನಿಂದ ಜನರ ಆರ್ಭಟ ಜೋರಾಗಿ ಕೇಳಿಸುತ್ತಿತ್ತು.

ಗಾಳಿ ಇವನ ಹಿಂದೆ ರಭಸದಿಂದ ಬೀಸುತ್ತಿತ್ತು. ಗಾಳಿಯಿಂದ ಉದ್ದೀಪ್ತವಾದ ಕಾಳ್ಗಿಚ್ಚಿನ ಪ್ರಭೆ ನಭೋಮಂಡಲವನ್ನು ಹರಡಿ ಈಗ ಅವನು ಓಡುತ್ತಿದ್ದ ದಾರಿಯ ಮೇಲೆ ತೆಳುವಾಗಿ ಬೆಳಕನ್ನು ಹರಡಿತ್ತು.

ಶಂಭು ಬರಿಯ ಕಾಲಿನಲ್ಲಿ ಓಡುತ್ತಿದ್ದ ಕಾಲಿಗೆ ಕಲ್ಲು ಮುಳ್ಳು ತಗಲಿ ನೋವಾಗುತ್ತಿತ್ತು. ಒಂದೆರಡು ಕಡೆ ಗಾಯವಾಗಿ ರಕ್ತ ಚಿಮ್ಮಿತ್ತು. ಅದನ್ನು ಲೆಕ್ಕಿಸದೆ ಅವನು ಓಡುತ್ತಿದ್ದ.

ಆದರೆ ಮಕ್ಕಳಿಬ್ಬರನ್ನು ಹೊತ್ತುಕೊಂಡು ಓಡುತ್ತಿದ್ದ ಶಂಭುವಿಗೆ ಬಹಳ ಬೇಗ ಆಯಾಸವಾಗಿತ್ತು. ಅನ್ನಾಹಾರದಲ್ಲಿ ಮಿತಿ ಮಾಡಿದ್ದರಿಂದ ದೇಹ ಸ್ವಲ್ಪ ಬಲಹೀನವಾಗಿತ್ತು. ಇಡೀ ದಿನ ನಡೆದ ಆಯಾಸ ಬೇರೆ ಅವನ ದೇಹದಲ್ಲಿ ತಲೆಹಾಕಿತ್ತು. ಮೊದಲು ಓಡಲಾರಂಭಿಸಿದ ವೇಗಕ್ಕೂ ಈಗಿನ ವೇಗಕ್ಕೂ ತೀರಾ ಕುಂದಿತ್ತು.